ಶಿಕ್ಷಣಾರ್ಥಿಗಳಿಗೆ ಪರಿಹಾರ ಧನ ಕೊಡುವ ಧೋರಣೆ ಇಟ್ಟುಕೊಂಡಿರುವುದಾಗಿ ಹೇಳಿದಿರಿ. ಆದರೆ ತಾವು ಅನುದಾನ ಕೊಡುವುದನ್ನು ಹೆಚ್ಚು ಮಾಡಿಲ್ಲ, ಮೂರು ವರ್ಷದ ಹಿಂದೆ ಏನು ಕೊಡುತ್ತಿದ್ದರೋ ಅಷ್ಟಕ್ಕೇ ನಿಲ್ಲಿಸಿದ್ದೀರಿ. ಅನುದಾನವನ್ನು ಹೆಚ್ಚಿಸದೆ ಸುಮ್ಮನೆ ಕೋರ್ಸ್ ತೆರೆಯಲು ಅವಕಾಶ ಕೊಟ್ಟರೆ ಶೋಷಣೆ ಆಗಲು ಅವಕಾಶವಾಗುತ್ತದೆ. ಆದ್ದರಿಂದ ಅನುದಾನವನ್ನು ಹೆಚ್ಚಿಸುವ ಉದ್ದೇಶ ಇದೆಯೇ ? ಲೈಬ್ರರಿ ವಿಚಾರದಲ್ಲಿ ಪ್ರತಿ ಗ್ರಾಮ ಪಂಡ್‌ದಲ್ಲೂ ಒಂದೊಂದು ಲೈಬ್ರರಿ ಮಾಡಬೇಂದಿದ್ದೇವೆ ಎಂದು ಹೇಳಿದಿರಿ, ಆದರೆ ಅದನ್ನು ಮಾಡುವುದಕ್ಕೆ ಯಾವ ಆರ್ಥಿಕ ಸಹಾಯವನ್ನೂ ಸೂಚಿಸಿಲ್ಲ. ಅದರ ಬಗ್ಗೆ ಹೇಳಬೇಕು.

ಶ್ರೀ ಬಿ. ಸೋಮಶೇಖರ್ —ಈಗಾಗಲೇ ಫ್ರೌಢಶಾಲ ಶಿಕ್ಷಣದ ಬಗ್ಗೆ ಶಿಕ್ಷಕರ ವೇತನದ ವಿಚಾರದಲ್ಲಿ ಗಮನಹರಿಸುತ್ತಿದ್ದೇವೆ ಟೀಚರ್ಸ್ ಅಪಾಯಿಂಟ್‌ಮೆಂಟ್ ಬೇಗ ಮಾಡುತ್ತೇವೆ. ಪೋಸ್ಟಿಂಗ್ ರಿಲೀವ್ಸ್ ಬಗ್ಗೆ ಕೇಳಿದ್ದಾರೆ. ಜನರಲ್ ರಿಕ್ರ್ಯೂಟ್‌ಮೆಂಟ್ ರೂಲ್ಸ್ ಏನಿದೆಯೋ ಅದನ್ನೇ ಸಮ್ಮ ಇಲಾಖೆಯಲ್ಲೂ ಅನುಸರಿಸುತ್ತೇವೆ. ಹೊಸದನ್ನು ಮಾಡಿಲ್ಲ. ಆಮೇಲೆ ಪಿಯುಸಿ ಎಜುಕೇಷನ್ ಬಗ್ಗೆ ಮಾನ್ಯ ರಾಣಿಯವರು ಕೇಳಿದ್ದಾರೆ. ಇಂಟಿಗ್ರೇಟೆಡ್ ಕೋರ್ಸ್ ಪಿಯುಸಿ ಕೋರ್ಸ್‌ಗೆ ಸಮಾ ಇದ್ದು ಇಂಟಿಗ್ರೇಟೆಡ್ ಕೋರ್ಸನ್ನೇ ನಾವು ಅಪ್‌ಲಿಫ್ಟ್ ಮಾಡಿದ್ದೇವೆ.

ಅಧ್ಯಕ್ಷರು.—ಇಲ್ಲಿಗೆ ಚರ್ಚೆ ಮುಗಿಯಿತು. ಈಗ ಬೇಡಿಕೆಯನ್ನು ಮತದಾನಕ್ಕೆ ಹಾಕುತ್ತೇನೆ.

"ಪ್ರಸ್ತಾವ ಏನೆಂದರೆ, ೩೧–೩–೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೧೫ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರುವ ವೆಚ್ಚವನ್ನು ಪಹಿಸಲು ಸರಕಾರಾತ್ಮಕ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡಿಂವುದು"

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ ೧೫–ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣ

"ರಾಜ್ಯಪಾಲರ ಶಿಫಾರಸಿನ ಮೇರೆಗೆ ೩೧–೩–೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣ ಸಂದಾಯ ಮಾಡುವಲ್ಲಿ ಬರುವ ವೆಚ್ಚವನ್ನು ಪಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩,೪೫,೦೨,೯೧,೦೦೦ ರೂ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಿಂವುದು

ಪ್ರಕಟಣೆ

ಅಧ್ಯಕ್ಷರು.—ದೂರ ದರ್ಶನದಲ್ಲಿ 'ಸಂಸತ್ ಸಮಾಚಾರ್' ಮಾದರಿಯಲ್ಲಿ 'ವಿಧಾನ ಮಂಡಲ ಸಮಾಚಾರ್' ಎಂಬ ಕಾರ್ಯಕ್ರಮವನ್ನು ಪ್ರಸಾರ ಮಾಡಬೇಕೆಂದು ಬೆಂಗಳೂರಿನ ದೂರದರ್ಶನ ಕೇಂದ್ರದ ನಿರ್ದೇಶಕರಿಗೆ ಸೂಚಿಸಿರುವ ಬಗ್ಗೆ ಮಾನ್ಯ ಸದಸ್ಯರಿಗೆ ಈಗಾಗಲೇ ತಿಳಿಸಲಾಗಿದೆ.

ನಮ್ಮ ಸೂಚನೆಯನ್ನು ಗಮನಿಸಿ ಮೊದಲನೆಯದಾಗಿ ಕಳೆದ ಶುಕ್ರವಾರ ಅಂದರೆ ದಿನಾಂಕ ೧೦–೬–೧೯೮೮ ರಂದು ರಾತ್ರಿ ೮.೪೦ ಗಂಟೆಗೆ ವಿಧಾನ ಮಂಡಲದ ಸದರಿ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು "ವಿಧಾನ ಮಂಡಲ ಸಮಾಚಾರ್" ಎಂಬ ಶೀರ್ಷಿಕೆಯಲ್ಲಿ ದೂರದರ್ಶನ ಕೇಂದ್ರ ಬೆಂಗಳೂರು ಇವರು ಬಿತ್ತರಿಸಿದ್ದಾರೆ ಹಾಗೂ ಇನ್ನು ಮುಂದೆ ವಿಧಾನ

ಮಂಡಲದ ಅಧಿವೇಶನದ ಕಾಲದಲ್ಲಿ ಪ್ರತಿ ಶುಕ್ರವಾರ ರಾತ್ರಿ ೮.೪೦ ಗಂಟೆಗೆ ಆಯಾ ವಾರದಲ್ಲಿ ಕೈಗೊಳ್ಳಲಾದ ಕರ್ನಾಟಕ ವಿಧಾನ ಮಂಡಲದ ಕಾರ್ಯಕಲಾಪಗಳ ಸಾರಾಂಶವನ್ನು ಪ್ರಸಾರ ಮಾಡುವ ವ್ಯವಸ್ಥೆಯನ್ನು ಮಾಡಲಾಗಿದೆಯೆಂದು ಬೆಂಗಳೂರು ದೂರದರ್ಶನ ಕೇಂದ್ರದ ವಾರ್ತಾ ಸಂಪಾದಕರು ತಿಳಿಸಿರುತ್ತಾರೆ. ಸದರಿ 'ವಿಧಾನ ಮಂಡಲ ಸಮಾಚಾರ'ವನ್ನು ಮುಂಬರುವ ಶುಕ್ರವಾರ ದಿನಾಂಕ ೧೭-೬-೧೯೮೮ ರಂದು ರಾತ್ರಿ ೮.೪೦ ಗಂಟೆಗೆ ತಾವೆಲ್ಲರೂ ಕೇಳಬಹುದು.

ಶ್ರೀ ಕೆ. ಮಲ್ಲಪ್ಪ.—ಬೆಂಗಳೂರಿನವರು ಮಾತ್ರ ಕೇಳಿದರೆ ಹೇಗೆ ? ರಾಜ್ಯದ ಎಲ್ಲಾ ಕಡೆ ಕೇಳುವಹಾಗೆ ಆಗಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೯ ಡಿಮಾಂಡ್‌ಗಳನ್ನು ೧೦ ಗಂಟೆಯಲ್ಲಿ ಆದರಲ್ಲೂ ಒಂದೇ ದಿವಸದಲ್ಲಿ ಮುಗಿಸಿದಂತಹ ಕೀರ್ತಿ ನಿಮಗೆ ಬರುತ್ತದೆ.

ಅಧ್ಯಕ್ಷರು.—ಅದೆಲ್ಲಾ ನಿಮ್ಮ ಸಹಕಾರದಿಂದ ಆಗಿದೆ.

ಸಭೆಯನ್ನು ನಾಳೆ ೧೦ ಗಂಟೆಗೆ ಮುಂದೂಡಲಾಗಿದೆ.

ಸದನವು ರಾತ್ರಿ 8 ಗಂಟೆ 57 ನಿಮಿಷಗಳಿಗೆ ಮುಕ್ತಾಯಗೊಂಡು ಪುನಃ ನಾಳೆ ಬುಧವಾರ ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು)